

## ಗುಳ್ಳಕಾಯಜ್ಜಿ ಪ್ರತಿಮೆ

ಬಾಹುಬಲಿಯ ಮುಂಭಾಗದ ಮಂಟಪದಲ್ಲಿರುವ ಗುಳ್ಳಕಾಯಜ್ಜಿಯ ಪ್ರತಿಮೆ ಐತಿಹ್ಯವೊಂದನ್ನು ಆಧರಿಸಿ ನಿರ್ಮಿತವಾದ ಇತ್ತೀಚಿನ ಶಿಲ್ಪ. ಬಾಹುಬಲಿಯ ವಿಗ್ರಹವನ್ನು ನಿರ್ಮಿಸಿದ ಗರ್ವದಲ್ಲಿದ್ದ ಚಾವುಂಡರಾಯ ಮಸ್ತಕಾಭಿಷೇಕ ಮಾಡಲು ಹೊರಟಾಗ ಅವನು ಸುರಿದ ಹಾಲು ವಿಗ್ರಹದ ತೊಡೆಯಿಂದ ಕೆಳಗಿಳಿಯಲಿಲ್ಲವಂತೆ. ಗುಳ್ಳಕಾಯಿಯಲ್ಲಿ ಹಾಲು ತುಂಬಿಕೊಂಡು ಬಂದ ಮುದುಕಿ ತಾನು ಅಭಿಷೇಕವನ್ನು ಪೂರ್ಣಗೊಳಿಸುವುದಾಗಿ ಹೇಳಿ, ಗುಳ್ಳಕಾಯಿಯಲ್ಲಿದ್ದ ಹಾಲು ಸುರಿದಾಕ್ಷಣ ಆ ಭವ್ಯವಿಗ್ರಹ ಪೂರ್ಣವಾಗಿ ತೊಯ್ದು ಹಾಲು ತೊರೆಯಾಗಿ ಹರಿಯಿತಂತೆ. ಭಕ್ತಿಯಲ್ಲಿ ಗರ್ವ ಕೂಡದೆಂಬುದನ್ನು ಸಾಂಕೇತಿಕವಾಗಿ ಸೂಚಿಸಲು ಈ ಕಥೆ ಹುಟ್ಟಿರಬಹುದು.

ಚಿಕ್ಕಬೆಟ್ಟದ ಸಂಸ್ಕೃತ ನಾಮಕರಣವಾದ ಕಟವಪ್ರ ಎಂದರೆ ಸಮಾಧಿಗುಹೆಯಿರುವ ಬೆಟ್ಟ ಎಂದು ಅರ್ಥ. ಚಿಕ್ಕಬೆಟ್ಟದಲ್ಲಿ ದೊರೆತ ಪುರಾತನ ಶಾಸನಗಳಲ್ಲಿ ಬಹುತೇಕ ಇಂತಹ ನಿಷಿಧಿಶಾಸನಗಳೇ ಆಗಿವೆ. ಕೊಂಡಕುಂದಾಚಾರ್ಯನು ತಪಸ್ಸು ಮಾಡಿದ ಸ್ಥಳವೂ ಇಲ್ಲಿದೆ. ಶ್ರೀ ಕವಿರತ್ನ ಎಂಬ ಕಲ್ಲು ಬರಹವು ಮಹಾಕವಿ ರನ್ನನ ಹಸ್ತಾಕ್ಷರವೆಂದು ಹೇಳಲಾಗಿದೆ. ಚಂದ್ರಗುಪ್ತ ಬಸದಿಯಲ್ಲಿರುವ ಜಾಲಂದ್ರದ ಮೇಲಿನ ಕಿರುಶಿಲ್ಪಗಳು ಭದ್ರಬಾಹು ಹಾಗೂ ಚಂದ್ರಗುಪ್ತರ ಜೀವನದ ಘಟನಾವಳಿಯನ್ನು ಚಿತ್ರಿಸುವ ಅಪೂರ್ವ ದಾಖಲೆಗಳಾಗಿವೆ. ಚಿಕ್ಕಬೆಟ್ಟದ ಬಸದಿಸಂಕೀರ್ಣದ ಒಂದು ಬದಿಯಲ್ಲಿ ಇರಿಸಿದ ಅಪೂರ್ಣಶಿಲ್ಪವು ಬಾಹುಬಲಿಯ ಅಣ್ಣ ಭರತನದೆಂದು ಗುರುತಿಸಲಾಗಿದೆ.

ಚಾವುಂಡರಾಯ ಬಸದಿ, ಮಾರಸಿಂಹನ ಮಾನಸ್ತಂಭ, ವಿಷ್ಣುವರ್ಧನನ ಪತ್ನಿ ಶಾಂತಲೆ ಕಟ್ಟಿಸಿದ ಸವತಿಗಂಧವಾರಣ ಬಸದಿ ಮೊದಲಾದವು ಚಿಕ್ಕಬೆಟ್ಟದ ಮೇಲಿರುವ ಮುಖ್ಯನಿರ್ಮಿತಿಗಳು. ದೊಡ್ಡಬೆಟ್ಟದ ಬಾಹುಬಲಿಯ ರೂಪವನ್ನು ಚಿಕ್ಕಬೆಟ್ಟದಿಂದಲೂ ನೋಡಿ ಕಣ್ತುಂಬಿಕೊಳ್ಳಬಹುದು. ಶ್ರವಣ ಬೆಳಗೊಳದ ಊರೊಳಗಿರುವ ಅಕ್ಕನ ಬಸದಿ, ಜೈನಮಠ, ಮಂಗಾಯಿ ಬಸದಿ, ಭಂಡಾರಿ ಬಸದಿ ಹಾಗೂ ನಗರ ಜಿನಾಲಯಗಳು ನೋಡತಕ್ಕ ಇತರ ತಾಣಗಳು.

## ಶುರುವಾದದ್ದು ಎಂದು?

ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಮಹಾಮಸ್ತಕಾಭಿಷೇಕವು ಮೊದಲಿಗೆ ಯಾವಾಗ ಜರುಗಿತೆಂಬುದನ್ನು ಖಚಿತವಾಗಿ ಹೇಳಲಾಗದು. ಚಾವುಂಡರಾಯನು ಕ್ರಿ.ಶ.981ರಲ್ಲಿ ಬಾಹುಬಲಿಯ ಮೂರ್ತಿಯನ್ನು ಪ್ರತಿಷ್ಠಾಪಿಸುವಾಗ ಮೊದಲ ಅಭಿಷೇಕ ನಡೆದಿರಲೇಬೇಕು. ಕ್ರಿ.ಶ. 1398ರಲ್ಲಿ ಮೊದಲಬಾರಿಗೆ ಈ ಮಸ್ತಕಾಭಿಷೇಕವು ನಡೆದಿರಬೇಕೆಂದು ಶಾಸನದ ಆಧಾರದಿಂದ ಡಾ.ಎಂ.ಎಚ್. ಕೃಷ್ಣ ಹೇಳುತ್ತಾರೆ.

ಪಂಡಿತಾರ್ಯನೆಂಬಾತನು ಈ ಮಸ್ತಕಾಭಿಷೇಕ ನೆರವೇರಿಸಿದ ಬಗೆಗೆ ಈ ಶಾಸನದಲ್ಲಿ ಸುದೀರ್ಘ ವಿವರಣೆಯಿದೆ. ಕೃಷ್ಣರವರು ಉಲ್ಲೇಖಿಸಿರುವ ಪತ್ರಿಕಾ ವರದಿಯೊಂದು 1887ರಲ್ಲಿ ನಡೆದ ಮಸ್ತಕಾಭಿಷೇಕದ ನೇತೃತ್ವವನ್ನು ಕೊಲ್ಲಾಪುರದ ಸ್ವಾಮೀಜಿಯವರು ವಹಿಸಿದ್ದರಂತೆ. ಮೂವತ್ತು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ ಇಪ್ಪತ್ತು ಸಾವಿರ ಜನರು ನೆರೆದಿದ್ದರೆಂದೂ ಕೊನೆಯ ಅಭಿಷೇಕದಲ್ಲಿ ಚಿನ್ನ, ಬೆಳ್ಳಿಯ ಹೂವುಗಳನ್ನೂ ನವರತ್ನಗಳನ್ನೂ 500 ಬೆಳ್ಳಿಯ ನಾಣ್ಯಗಳನ್ನೂ ಬಳಸಲಾಯಿತು ಎಂದು ವರ್ಣಿಸುತ್ತದೆ.

1953ರಲ್ಲಿ ಮಸ್ತಕಾಭಿಷೇಕವು ಒಂದು ತಿಂಗಳಿಗೂ ಹೆಚ್ಚು ಅವಧಿಯಲ್ಲಿ ಮುಂದುವರೆದು ಮುಖ್ಯಕಾರ್ಯಕ್ರಮದ ದಿನ ಒಂದು ಲಕ್ಷಕ್ಕೂ ಮಿಕ್ಕಿ ಜನರು ಸೇರಿದ್ದರೆಂದು ಇನ್ನೊಂದು ವರದಿ ಹೇಳುತ್ತದೆ. 1940 ಫೆಬ್ರವರಿಯಲ್ಲಿ ಜರುಗಿದ ಮಸ್ತಕಾಭಿಷೇಕದ ಹೊಣೆಯನ್ನು ಆಗಿನ ಮೈಸೂರು ಸರ್ಕಾರದ ಮುಜರಾಯಿ ಇಲಾಖೆಯು ಮೊದಲ ಬಾರಿಗೆ ನಿರ್ವಹಿಸಿತು. ಈ ಹಿಂದಿನ ಮಸ್ತಕಾಭಿಷೇಕವು 8 ಫೆಬ್ರವರಿ 2006ರಂದು ಜರುಗಿದ್ದು, ಅಂದು ಆರು ತಾಸುಗಳವರೆಗೆ ನಡೆದ ಅಭಿಷೇಕದಲ್ಲಿ ನೂರಾ ಎಂಟು ಜಲಕಲಶಗಳಲ್ಲದೆ, 1000 ಲೀ.ಹಾಲು, 3000 ಲೀ. ನೀರು. 250 ಕೆ.ಜಿಗಳಷ್ಟು ಅರಿಶಿನ ಹಾಗೂ ಚಂದನ ಬಳಸಲಾಗಿತ್ತು.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ನಿರ್ಮಿಸಲಾಯಿತು. ಬೆಳ್ಗೊಳ ಎನ್ನುವ ಹೆಸರು 650 ರಷ್ಟು ಹಳೆಯ ಕಾಲದ ಶಾಸನದಲ್ಲೇ ಕಂಡುಬರುತ್ತದೆ. ಆದ್ದರಿಂದ ಶ್ರವಣ ಬೆಳಗೊಳ ಎಂಬ ಹೆಸರು ಈಗಿನ ಊರಿಗೆ ಅನ್ವಯಿಸುವ ಇತ್ತೀಚಿನ ಸ್ಥಳನಾಮ.

1119ರ ಶಾಸನದಲ್ಲಿ ಈ ಊರನ್ನು ಗೊಮ್ಮಟಪುರ ಎಂದು ಕರೆದಿದೆ. ಈ ಸಮಗ್ರ ಕ್ಷೇತ್ರವನ್ನು ಬೆಳ್ಗೊಳ ತೀರ್ಥ ಎಂದು ಕರೆಯುತ್ತಿದ್ದರಂತೆ. ಚಿಕ್ಕಬೆಟ್ಟದಲ್ಲಿ ತಪಸ್ಸಿಗೆ ತಂಗಿದ್ದ ಮುನಿಗಳು ಭಿಕ್ಷೆಬೇಡಲು ಬರುತ್ತಿದ್ದ ಬೆಳ್ಗೊಳ ಎಂಬ ಊರು ಇದೇ ಹಳೆಯ ಬೆಳ್ಗೊಳ. ಕಾಲಕ್ರಮದಲ್ಲಿ ಎರಡು ಬೆಟ್ಟಗಳನ್ನೂ ಒಳಗೊಂಡ ಸಮಗ್ರ ಪ್ರದೇಶವನ್ನು ಬೆಳಗೊಳ ಎಂಬ ಹೆಸರಿನಿಂದಲೇ ಗುರುತಿಸತೊಡಗಿದರು. ದಟ್ಟವಾದ ಕಾಡು ತುಂಬಿದ್ದ ಬೆಟ್ಟಪ್ರದೇಶವು ಚಾವುಂಡರಾಯನು ಬಾಹುಬಲಿಯ ವಿಗ್ರಹವನ್ನು ಕೆತ್ತಿಸಲು ತೊಡಗಿದ ಮೇಲೆ ಜನವಸತಿಯ ಬೀಡಾಗಿ ಪರಿವರ್ತನೆ ಹೊಂದಿತು. ಹತ್ತಿರದಲ್ಲಿ ಬೆಳ್ಗೊಳ ಎಂಬ ಹೆಸರಿನ ಇನ್ನೂ ಕೆಲವು ಹಳ್ಳಿಗಳಿದ್ದುದರಿಂದ ಜೈನಕ್ಷೇತ್ರವಾದ ಬೆಳ್ಗೊಳವನ್ನು ಶ್ರವಣಬೆಳ್ಗೊಳ ಎಂದು ಪ್ರತ್ಯೇಕವಾಗಿ ಗುರುತಿಸತೊಡಗಿದರು. ದಾಖಲೆಗಳ ಅನುಸಾರ, 1810 ರ ದಿವಾನ್ ಪೂರ್ಣಯ್ಯನವರ ಸನ್ನದಿನಲ್ಲಿ ಶ್ರವಣಬೆಳ್ಗೊಳ ಎಂಬ ಹೆಸರು ಮೊದಲಬಾರಿಗೆ ಕಾಣಸಿಗುತ್ತದೆ.

ಪೂರ್ವಕಾಲದಲ್ಲಿ ದೊಡ್ಡಬೆಟ್ಟವನ್ನು ಇಂದ್ರಗಿರಿ ಎಂದೂ ಚಿಕ್ಕಬೆಟ್ಟವನ್ನು ಚಂದ್ರಗಿರಿಯೆಂದೂ ಕರೆಯುತ್ತಿದ್ದರು. ಇಂದ್ರಗಿರಿಯನ್ನು ವಿಂಧ್ಯಗಿರಿ ಎಂದೂ ಹೆಸರಿಸಲಾಗಿದೆ. ಇಡೀ ಬೆಟ್ಟವು ಒಂದೇ ಬೃಹತ್ತಾದ ಕಗ್ಗಲ್ಲಿನಿಂದ ರೂಪುಗೊಂಡಿದೆ.

ದೊಡ್ಡ ಬೆಟ್ಟಕ್ಕೆ ಮೊದಲೇ ರಸ್ತೆಯ ಬಲಭಾಗದಲ್ಲಿ ಪುಷ್ಕರಣಿಯೊಂದು ಕಾಣುತ್ತದೆ. ಅಚ್ಚುಕಟ್ಟಾದ ಸೋಪಾನಗಳಿಂದಲೂ ಗಾರೆಯ ಶಿಲ್ಪಗಳಿರುವ ಸುಂದರಗೋಪುರಗಳಿಂದಲೂ ಶೋಭಿಸುವ ಈ ಕೊಳವನ್ನು ನಿರ್ಮಿಸಿದವರು ಮೈಸೂರು ಅರಸರಾದ ಚಿಕ್ಕದೇವರಾಜ ಒಡೆಯರು. 1713ರಲ್ಲಿ ಅರಸರಾದ ಮೊದಲನೇ ಕೃಷ್ಣರಾಜ ಒಡೆಯರ ಕಾಲದಲ್ಲಿ ಕೊಳದ ನಿರ್ಮಾಣ ಪೂರ್ಣಗೊಂಡಿತು. ಇತ್ತೀಚಿನದಾದ ಈ ಕೊಳಕ್ಕೂ ಬಹುಪ್ರಾಚೀನ ಇತಿಹಾಸವಿರುವ ಬೆಳ್ಗೊಳದ ಊರ ಹೆಸರಿಗೂ ಸಂಬಂಧವಿಲ್ಲ. ಆದರೆ, ಶ್ರವಣಬೆಳ್ಗೊಳಕ್ಕೆ ಬಂದವರನ್ನು ಮೊದಲಿಗೆ ಆಕರ್ಷಿಸುವುದು ಈ ಸೊಬಗಿನ ಕೊಳವೇ .

ದೊಡ್ಡಬೆಟ್ಟದ ಮೇಲೆ ಚಾವುಂಡರಾಯನು ಬಾಹುಬಲಿಯ ಮೂರ್ತಿಯನ್ನು ಕೆತ್ತಿಸಿದ್ದು ಕ್ರಿ.ಶ. 983ರ ವೇಳೆಗೆ ಎಂಬುದು ವಿದ್ವಾಂಸರ ಅಭಿಪ್ರಾಯ. ರಾಜಮಲ್ಲ ಸತ್ಯವಾಕ್ಯ ಅಥವಾ ರಾಚಮಲ್ಲನೆಂಬ ಹೆಸರಿನ ಗಂಗವಂಶದ ದೊರೆ 974ರಿಂದ 984 ರವರೆಗೆ ಆಳುತ್ತಿದ್ದ. ಚಾವುಂಡರಾಯನು ಈ ಅರಸನ ಮಂತ್ರಿಯಾಗಿದ್ದ ಅವಧಿಯಲ್ಲೇ ಬಾಹುಬಲಿಯ ಶಿಲ್ಪನಿರ್ಮಾಣವಾಯಿತು. ಚಾವುಂಡರಾಯನು 978ರಲ್ಲಿ ರಚಿಸಿದ ತ್ರಿಷಷ್ಠಿಲಕ್ಷಣ ಪುರಾಣದಲ್ಲಿ ಶ್ರವಣಬೆಳ್ಗೊಳದ ಬಾಹುಬಲಿಮೂರ್ತಿಯ ಪ್ರಸ್ತಾಪ ಇಲ್ಲದಿರುವುದರಿಂದ ಈ ಶಿಲ್ಪದ ನಿರ್ಮಾಣವು ಕ್ರಿ.ಶ. 978ರ ನಂತರ 983ರ ವೇಳೆಗೆ ಆಗಿರಬಹುದು.

ಈ ಶಿಲ್ಪದ ವಿಶಿಷ್ಟತೆಯನ್ನು ಷ. ಶೆಟ್ಟರ್ ರವರು ಗುರುತಿಸುವುದು ಹೀಗೆ: 'ಇತಿಹಾಸಯುಗದಲ್ಲಿ ಪ್ರಪಂಚದ ಯಾವ ಶಿಲ್ಪಿಯೂ ಗೊಮ್ಮಟನಂತಹ ಭವ್ಯಮೂರ್ತಿಯನ್ನು ಕಗ್ಗಲ್ಲಿನ ಏಕಶಿಲೆಯಲ್ಲಿ ಕೆತ್ತುವ ಧೈರ್ಯವನ್ನಾಗಲೀ ತಾಳ್ಮೆಯನ್ನಾಗಲೀ ತೋರುವ ಸಾಹಸ ಮಾಡಲಿಲ್ಲ; ಅಲ್ಲದೆ, ತನ್ನ ಪ್ರಯತ್ನದಲ್ಲಿ ಈ ಮಟ್ಟದ ಧಾರ್ಮಿಕ ಸೊಬಗನ್ನು ಸೆರೆಹಿಡಿಯುವ ಸಿದ್ಧಿಯನ್ನು ಸಾಧಿಸಿಕೊಳ್ಳಲಿಲ್ಲವೆಂದರೆ ಅತಿಶಯೋಕ್ತಿಯೇನೂ ಅಲ್ಲ.' ಬಾಹುಬಲಿಯ ಪಾದದೆಡೆಯಲ್ಲಿ ಕನ್ನಡ, ಮರಾಠಿ ಹಾಗೂ ತಮಿಳು ಭಾಷೆಗಳಲ್ಲಿರುವ ಶಾಸನಗಳಲ್ಲಿ ಚಾವುಂಡರಾಯನು ವಿಗ್ರಹವನ್ನು ನಿರ್ಮಿಸಿದ ವಿವರವಿದೆ. ವಿಗ್ರಹದ ಅಕ್ಕಪಕ್ಕ ಇರುವ ದ್ವಾರಪಾಲಕರ ಸುಂದರವಾದ ಕುಸುರಿ ಕೆತ್ತನೆಯಿರುವ ವಿಗ್ರಹಗಳು ಹೊಯ್ಸಳ ಕಾಲದವು. ಹೊಯ್ಸಳ ವಿಷ್ಣುವರ್ಧನನ ದಂಡನಾಯಕ ನಿರ್ಮಿಸಿದ ಸುತ್ತಾಲಯದಲ್ಲಿರುವ 24 ತೀರ್ಥಂಕರರ ವಿಗ್ರಹಗಳು ಪ್ರಾಚೀನತೆಯ ದೃಷ್ಟಿಯಿಂದ ಮಹತ್ವದವು. ಉಳಿದ ಕೆಲವು ವಿಗ್ರಹಗಳು ಮುಂದಿನ ಶತಮಾನಗಳಲ್ಲಿ ನಿರ್ಮಿತವಾದವು.